**ಸಾಕ್ಷಿಯನ್ನು ದಿನಾಂಕ: 29.07.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ RDB ರವರಿಂದಃ**

ನನಗೆ ಬ್ಯಾಂಕ ಯಾವುದು ಹಾಗೂ ನೊಂದಣಿ ಕಛೇರಿ ಯಾವುದು ಎಂದು ಗೊತ್ತಾಗುತ್ತದೆ ಎಂದರೆ ನಿಜ. 1990 ನೇ ಇಸ್ವಿಯಿಂದ ಮನೆತನದ ಖರ್ಚು ಹಾಗೂ ಮಕ್ಕಳ ಮದುವೆ ಸಲುವಾಗಿ ಸಾಲ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಯಾವುದೇ ಸಾಲ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಸಾಲವನ್ನು ಮರು ಪಾವತಿ ಸಲುವಾಗಿ ಮನೆ ನಂ. 953 ನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆ ನಂ. 953 ನ್ನು ಖರೀದಿ ಕೊಡುವ ವಿಷಯ ನನಗೆ ಗೊತ್ತಿದ್ದೆ ಸಹಿ ಮಾಡಿ ಖರೀದಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಸಾಲ ಮಾಡಿ ನಮ್ಮ ವ್ಯಾಪಾರವನ್ನು ಇನ್ನೂ ಹೆಚ್ಚಿನದಾಗಿ ಬೆಳೆಸೋಣಾ ಎಂದು ನನಗೆ ಸುಳ್ಳು ಹೇಳಿ ನನ್ನ ಸಹಿ ಪಡೆದಿರುತ್ತಾನೆ ಎಂದು ನಾನು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಆಸ್ತಿ ನಂ. 823 ರ ಖರೀದಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಸದರಿ ಆಸ್ತಿಯ ಖರೀದಿಗೆ ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯ ಖರೀದಿಗೆ ಹಾಗೂ ಅದರಲ್ಲಿ ಕಟ್ಟಿರುವ ಮನೆಗೆ ನಾನೇ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಯ ಸ್ವಂತ ಗಳಿಸಿದ ಆಸ್ತಿಗಳಾಗಿದ್ದು ಅವುಗಳಿಗೆ ನಾನು ಯಾವುದೇ ಹಣ ಸಹಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ

ನಂ. 2 ರಿಂದ 6 ರವರಿಗೂ ಹಾಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸುಳ್ಳಾಗಿ ಪ್ರತಿವಾದಿ ನಂ. 2 ರಿಂದ 6 ರವರನ್ನು ಸಹ ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನಗೆ ಮೋಸ ಮಾಡಿ 1ನೇ ಪ್ರತಿವಾದಿಯು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**